ಸೀಮಾ' ಸರಹದ್ದು ದಾಟುವ ತಾಣಕ್ಕೆ ಬಂದರು. ಅತ್ತ ನೇಪಾಳದ ಭೈರಹವಾ ಹಾಗೂ ಇತ್ತ ಭಾರತದ ನವ್ತನವಾ ಇರುವ ಸೀಮಾ ಸರಹದ್ದು ಅದು. ಸೊನೌಲೀ ಉತ್ತರ ಪ್ರದೇಶದಲ್ಲಿರುವ ಒಂದು ಸಣ್ಣ ಊರು. ಆ ಸಂಜೆ ತೀವ್ರ ಚಳಿಯಿಂದ ಅವರ ಬೆರಳುಗಳು ಜಡಗಟ್ಟಿದ್ದವು. ಕಿವಿ ಮೂಗು ಎಲ್ಲವೂ ಬಂದ್ ಆದಂಥ ಅನುಭವ. ಸರಿಯಾಗಿ ಉಸಿರಾಡುವುದೂ ಕಷ್ಟವಾಗಿತ್ತು.

ಆ ಸರಹದ್ದಿನಲ್ಲಿ ಸೀಮಾ ಸುರಕ್ಷಾ ಯೋಧರ ಕ್ಯಾಬಿನ್ ಇತ್ತು. ಅವರ ಅನುಮತಿ ಪಡೆದು, ಅಲ್ಲಿಯೇ ಆ ರಾತ್ರಿ ಕಳೆದರು. ಬೆಳಗ್ಗೆ ಎದ್ದು ಸರಹದ್ದು ದಾಟಿ ಉತ್ತರ ಪ್ರದೇಶದಲ್ಲಿ ದಾಖಲಾದರು. ಹತ್ತು ಹದಿನೈದು ಕಿಮೀ ದೂರದಲ್ಲಿ ನವ್ತನವಾ ಗಾವ್ ಇತ್ತು. ಅಲ್ಲಿಯ 'ಲಯನ್ಸ್ ಕ್ಲಬ್'ಗೆ ಓರ್ವ ವೈದ್ಯರು ಅಧ್ಯಕ್ಷರಾಗಿದ್ದರು. ಅವರ ಮನೆ ತಲುಪಿದರು. ಅಷ್ಟೆಲ್ಲ ಸಾಹಸ ಮಾಡಿ ನೇಪಾಳ ಸುತ್ತಿ ಬಂದ ಯುವಕರನ್ನು ಅವರು ಸ್ನೇಹದಿಂದ ಸ್ವಾಗತಿಸಿ, ಬೆಳಗಿನ ಉಪಹಾರ, ಚಹಾ ನೀಡಿದರು.

ಅಲ್ಲಿಂದ ಹೊರಟವರು ಸರಹದ್ದಿನಿಂದ 95 ಕಿಲೋಮೀಟರ್ ದೂರದಲ್ಲಿದ್ದ ಗೋರಖ್‌ಪುರ್ ತಲುಪಿದರು. ಅಲ್ಲಿ ಸುಪ್ರಸಿದ್ಧವಾದ 'ಗೀತಾ ಪ್ರೆಸ್' ಪುಸ್ತಕ ಪ್ರಕಾಶನವನ್ನು ನೋಡಲು ಹೋದರು. ಅದು 1923ರಲ್ಲಿಯೇ ಆರಂಭವಾಗಿದ್ದ ಪ್ರಕಾಶನ ಸಂಸ್ಥೆ. ಗೋರಖ್‌ಪುರದಿಂದ ಬಸ್ತಿ ಎಂಬಲ್ಲಿಗೆ ಸುಮಾರು 68 ಕಿ.ಮೀ. ಹಾದಿ. ಆ ದಿನಗಳಲ್ಲಿ ಬಸ್ತಿಗೆ ಹೊಸದಾದ ಪಕ್ಕಾ ರಸ್ತೆ ಸಿದ್ಧವಾಗಿತ್ತು. ನಿರಾಯಾಸವಾಗಿ ಸೈಕಲ್ ತುಳಿದುಕೊಂಡು, ಮರುದಿನ ಅಯೋಧ್ಯೆ ತಲುಪಿದರು. ಅಲ್ಲಿಯ ಸರಯೂ ನದಿ ಮತ್ತು ಅದರಲ್ಲಿಯ ಆಮೆಗಳ ಬಗ್ಗೆ ಸಾಕಷ್ಟು ಕೇಳಿದ್ದರು. ಅವನ್ನು ನೋಡುವ ಆತುರ.

ಅಯೋಧ್ಯೆಯಲ್ಲಿ 'ಬಿರ್ಲಾ ಧರ್ಮಶಾಲೆ' ಇದೆ. ಅಲ್ಲಿಯೇ ಉಳಿದುಕೊಂಡರು. ಒಂದು ದಿನ ಅಯೋಧ್ಯೆಯಲ್ಲಿ ತಿರುಗಾಡಿ, ಅಲ್ಲಿಂದ ಲಖನೌಗೆ ಹೊರಟರು. ಲಖನೌಗೆ ಸುಮಾರು 135 ಕಿ.ಮೀ.ಗಳ ಹಾದಿ. ಲಖನೌ ನಗರದಲ್ಲಿ 'ಯೂತ್ ಹಾಸ್ಟೆಲ್'ನಲ್ಲಿ ಇಳಿದುಕೊಂಡರು. ಅಲ್ಲಿಯ 'ಬಡೀ ಇಮಾಮ್ಬಾಡ' ಅಂದರೆ ಭೂಲ್ಭುಲಯ್ಯ ಮೊದಲಾದುವುಗಳನ್ನು ಸೈಕಲ್‌ನಲ್ಲೇ ತಿರುಗಿ ನೋಡಿ ಬಂದರು.

ಅಲ್ಲಿಗೆ ಬರುವ ಹೊತ್ತಿಗೆ ದಿನೇಶನಿಗೆ ಪುರುಷೋತ್ತಮನ ಮೇಲಿನ ಸಿಟ್ಟು ತಾರಕಕ್ಕೆ ತಲುಪಿತ್ತು. ಹಣದ ಲೆಕ್ಕ ಕೇಳಿಯೇ ಬಿಟ್ಟ. ಆ ಕಾರಣಕ್ಕೆ ಅವರ ನಡುವೆ ಸಾಕಷ್ಟು ಗಲಾಟೆ ಬೈದಾಟ ನಡೆಯಿತು. ತಾವೊಂದು ತಂಡವಾಗಿ ಬಂದವರು. ಹಿಂತಿರುಗುವವರೆಗೆ ತಂಡ ಒಡೆಯದೆ, ಮಾತು ಕೈಮೀರದಿರಲಿ ಎಂದು ಭಾವೇಶ್ ಇಬ್ಬರನ್ನೂ ಶಾಂತವಾಗಿಸಲು ಪ್ರಯತ್ನಿಸಿದರು. ಈ ಬೈದಾಟದಿಂದ ಪುರುಷೋತ್ತಮನ ಮೇಲೇನೂ ಪರಿಣಾಮವಾಗಿರಲಿಲ್ಲ. ಇಲ್ಲಿಗೆ ಬರುವ ಹೊತ್ತಿಗೆ 'ಹಣ ಎಲ್ಲ ಮುಗಿಯಿತು' ಎಂದು ಪುರುಷೋತ್ತಮ ಸಲೀಸಾಗಿ ಘೋಷಿಸಿಬಿಟ್ಟದ್ದ. 'ಏನಿಲ್ಲ ಎಂದರೂ 1314 ಸಾವಿರ ರೂಪಾಯಿ ಇನ್ನೂ ಮಿಕ್ಕಿರಬೇಕು' ಎಂದು ದಿನೇಶನ ಅಂದಾಜು. ಕಾರಣ ಯಾತ್ರಿ ಚೆಕ್ ಅಲ್ಲದೆ, ತಮ್ಮ ಮಾರ್ಗದಲ್ಲಿ ಅನೇಕರು ಹಣವನ್ನೂ ನೀಡಿ ಸಹಾಯ ಮಾಡಿದ್ದರು.

ಮರುದಿನ ಲಖನೌನ ಬಜಾರಿನಲ್ಲಿ ಅಲೆದಾಡುವಾಗ, ಪುರುಷೋತ್ತಮ ಒಂದು ಅಂಗಡಿಗೆ ಹೋಗಿ ಲಖನೌ ನಗರದ ವಿಶ್ವ ಪ್ರಸಿದ್ಧ ಚಿಕನ್ ವರ್ಕ್ ಕಸೂತಿ ಇದ್ದ ಸೀರೆ ಮತ್ತು ಸಲ್ವಾರ್ ಸೂಟ್ ಕೊಂಡುಕೊಂಡ. ಇವರಿಗೋ 'ಅರೆ ಪುರುಷೋತ್ತಮ ಸಲೀಸಾಗಿ ಇಷ್ಟೊಂದು ಹಣವನ್ನು ಹೇಗೆ ಖರ್ಚು ಮಾಡುತ್ತಿದ್ದಾನೆ' ಎಂದು ಅರ್ಥವಾಗಲಿಲ್ಲ! ಆದರೆ ಆತನಲ್ಲಿ ಹಣದ ವಿಚಾರವಾಗಿ ಏನೇ ಕೇಳುವುದು ವ್ಯರ್ಥ ಎಂದು ಅರಿವಾಗಿತ್ತು. ಆರೇಳು ಸಾವಿರದ ಬಟ್ಟೆ ಕೊಂಡ ಆತ, ಅಂಗಡಿಯಾತನಿಗೆ ಎಲ್ಲವನ್ನೂ ಗೋಂದಿಯಾಗೆ ಕಳುಹಿಸಲು ಹೇಳಿದ. ಅವರ ಯಾತ್ರೆಗೆಂದು ಮೂವರೂ ಬಹಳ ಪರಿಶ್ರಮದಿಂದ ಸಂಗ್ರಹಿಸಿದ್ದ ಹಣವನ್ನೆಲ್ಲ ಪುರುಷೋತ್ತಮ ತನ್ನ ಸ್ವಂತ ಖರ್ಚಿಗೆ ಬಳಸಿದ್ದ. ಆತನ ಮೇಲಿಟ್ಟ ಭರವಸೆ ಯಾವಾಗಲೋ ಹಾರಿ ಹೋಗಿ, ಮತ್ತಷ್ಟು ಜಗಳವಾಡಲು ಅವರಿಗೆ ಶಕ್ತಿಯೇ ಉಳಿದಿರಲಿಲ್ಲ.

ದಿನೇಶ್ ಮತ್ತು ಭಾವೇಶ್ ಇನ್ನುಳಿದ ಪಯಣದ ಸಮಯದಲ್ಲಿ ಯಾರು ಸಿಗುತ್ತಾರೋ ಅವರ ಭರವಸೆಯ ಮೇಲೆ ತಮ್ಮ ಯಾತ್ರೆ ಮುಗಿಸಲು ನಿರ್ಧರಿಸಿದರು. ಯಾತ್ರೆ ಮುಗಿಸಿ ಸುಸೂತ್ರವಾಗಿ ಮನೆ ತಲುಪಿದರೆ ಸಾಕು ಅನಿಸಿತ್ತು. ಹೊರಟಾಗಿನ ಉತ್ಸಾಹ ಉಳಿದಿರಲಿಲ್ಲ.

ಪುರುಷೋತ್ತಮನ ಜೊತೆಗೆ ವಾದಕ್ಕೆ ಇಳಿಯುವುದರಲ್ಲಿಯೂ ಉಪಯೋಗ ಕಾಣಲಿಲ್ಲ. ಮೂವರೂ ಲಖನೌನಿಂದ ಹೊರಟು ದಿಲ್ಲಿ ತಲುಪಿದರು. ಬಲು ದೀರ್ಘ ಹಾದಿಯನ್ನು ಕ್ರಮಿಸಿ ಬಂದಿದ್ದರು. ದಿಲ್ಲಿ ತಲುಪುತ್ತಲೇ ಪ್ರಫುಲ್ಲ ಪಟೇಲರ ಸೀ.ಜೆ. ಕಂಪನಿಯ ಕಚೇರಿಗೆ ಹೋದರು. ಅವರು ಕೊಟ್ಟಿದ್ದ ಪತ್ರದ ಕಾರಣ, ಅಲ್ಲಿಯ ಕರ್ಮಚಾರಿಗಳೆಲ್ಲ ಇವರನ್ನು ಉತ್ಸಾಹದಿಂದ ಸ್ವಾಗತಿಸಿದರು. ರಾತ್ರಿ ತಂಗಲು ಜಾಗ ಮತ್ತು ಊಟ–ತಿಂಡಿ ಎಲ್ಲದರ ವ್ಯವಸ್ಥೆಯನ್ನೂ ಮಾಡಿದರು. ಅವರು ಸಿಟಿ ಬಸ್ ಹಿಡಿದು ದಿಲ್ಲಿಯನ್ನು ತಿರುಗಾಡಲು ಹೇಳಿದರು. ಆದರೆ ನಮ್ಮ ಇಡೀ ಪ್ರವಾಸದಲ್ಲಿ 'ಸೈಕಲ್ ಬಿಟ್ಟು ತಾವು ಬೇರೆ ಯಾವ ಗಾಡಿಯಲ್ಲೂ ಹೋಗುವುದಿಲ್ಲ' ಎಂದು ನಿಯಮ ಹಾಕಿಕೊಂಡಿದ್ದ ಕಾರಣ, ಸೈಕಲ್ಲಿನಲ್ಲಿಯೇ ದಿಲ್ಲಿ ಅಲೆದರು. ಕೆಂಪುಕೋಟೆಯಿಂದ ಹಿಡಿದು ಇಂಡಿಯಾ ಗೇಟ್‌ವರೆಗೆ, ರಾಜ್‌ಘಾಟ್‌ನಿಂದ ಹಿಡಿದು ಕುತುಬ್‌ಮಿನಾರ್‌ವರೆಗೆ ಎಲ್ಲ ಜಾಗಗಳನ್ನೂ ಸೈಕಲ್ ತುಳಿದು ಹೋಗಿ ನೋಡಿ ಬಂದರು. ದಿನೇಶ್ ಪ್ರತಿ ಜಾಗದ ವರ್ಣನೆ ಮಾಡಿ ಭಾವೇಶ್‌ಗೆ ಹೇಳುತ್ತಿದ್ದ. ಆ ಜಾಗದ ಮಹತ್ವವನ್ನು ತಿಳಿಸುತ್ತಿದ್ದ.

ಎರಡು ದಿನ ದಿಲ್ಲಿಯಲ್ಲಿ ತಿರುಗಾಡಿ ಮಥುರಾ ತಲುಪಿದರು. ಇಲ್ಲಿ 'ಗಾಯತ್ರಿ ಶಕ್ತಿ ಪೀಠ'ದಲ್ಲಿ ರಾತ್ರಿ ಇಳಿದುಕೊಳ್ಳಲು ಅವಕಾಶವಾಯಿತು. ಅಲ್ಲಿಂದ ಹೊರಟು ಆಗ್ರಾ ತಲುಪಿದರು. ತಾಜ್‌ಮಹಲ್ ನೋಡುವ ಆಸೆ. ಆದರೆ ಸೈಕಲ್ ಅನ್ನು ಸುರಕ್ಷಿತವಾಗಿ ಎಲ್ಲಾದರೂ ಇಡಬೇಕಲ್ಲ. ಅಲ್ಲಿಯ ಸೆಕ್ಯುರಿಟಿ, 'ನಿಮ್ಮ ಸೈಕಲ್ ನಾವು ನೋಡಿಕೊಳ್ಳುತ್ತೇವೆ. ನೀವು ನಿಶ್ಚಿಂತರಾಗಿ ತಾಜ್‌ಮಹಲ್ ನೋಡಿ ಬನ್ನಿ' ಎಂದರು. ತಮ್ಮ ಕಣ್ಣಿನಲ್ಲಿ ಕಾಣಲಾರದ ತಾಜ್‌ಮಹಲನ್ನು ಮನದ ಕಣ್ಣಿನಿಂದ ಕಲ್ಪಿಸಿ ನೋಡುತ್ತಿದ್ದರು. ದಿನೇಶ್ ವಿವರಿಸುತ್ತಾ ಹೊರಟಿದ್ದ. ತಣ್ಣನೆಯ ಅಮೃತಶಿಲೆ ಸ್ಪರ್ಶಕ್ಕೆ ಸಿಕ್ಕಿತ್ತು. ತನ್ನ ಸೌಂದರ್ಯವನ್ನು ಅರುಹಿತ್ತು. ಭಾವೇಶ್‌ಗೇನೂ ತಾನು ತಾಜಮಹಲ್ ನೋಡಲಾರೆ ಎಂಬ ದುಃಖವಿರಲಿಲ್ಲ. ಪಯಣದ ಅನುಭವಗಳು ಅವರಿಗೆ ಅಪೂರ್ವವಾಗಿದ್ದವು. ಹೊರಗೆಲ್ಲೋ ಕೈಗೆ ಎಟುಕದಂತೆ ದೂರ ಇದ್ದ ಜಗತ್ತು, ಈ ಸಾವಿರ ಸಾವಿರ ಮೈಲಿಗಳ ಪಯಣದಲ್ಲಿ ಹತ್ತಿರವಾಗಿತ್ತು. ಅದರ ಅಂತರಾಳವನ್ನು ಹೊಕ್ಕು ಬಂದ ಆತ್ಮವಿಶ್ವಾಸ ಭಾವೇಶ್‌ಗೆ.

ಆಗ್ರಾದಿಂದ ಹೊರಟು ಝಾನ್ಸಿ, ಗ್ವಾಲಿಯರ್, ಧೌಲಪುರ್ ಮೂಲಕ ಹಾದು, ಚಂಬಲ್ ಕಣಿವೆಯ ಭಿಂಡ್ ಮತ್ತು ಮುರೀನಾ ತಲುಪಿದರು. ಭಾವೇಶ್ ಜಗತ್ತನ್ನು ತಮ್ಮ ಕಿವಿಗಳಿಂದ ಕಾಣುತ್ತಿದ್ದರು. 'ಇಲ್ಲಿ ಹಾಲು ಮಾರುವವ ಕೂಡಾ ಎರಡು ನಳಿಕೆಯ ಬಂದೂಕು ನೇತು ಹಾಕಿಕೊಂಡು ಓಡಾಡುತ್ತಿದ್ದಾನೆ!' ಎಂದು ದಿನೇಶ್ ಹೇಳಿದ. ಚಂಬಲ್ ಕಣಿವೆಯಲ್ಲಿ ಒಂದು ಹಳ್ಳಿಯ ಸರಪಂಚನ ಮನೆಯಲ್ಲಿ ಉಳಿದುಕೊಂಡಾಗ, ಭಾವೇಶ್ ಬಹಳ ನಾಜೂಕಾಗಿ ಬಂದೂಕಿನ ಬಗ್ಗೆ ವಿಚಾರಿಸಿದರು. ಅದಕ್ಕೆ ಆ ಸರಪಂಚ, 'ಇಲ್ಲಿ ಬಂದೂಕು ತಗುಲಿ ಹಾಕಿಕೊಂಡು ಓಡಾಡುವುದು ಪ್ರತಿಷ್ಠೆಯ ವಿಷಯ. ಅದೊಂದು ರೀತಿ ಅವರ ಅಹಂಕಾರದ ಸಂಕೇತ. ಹಾಗಾಗಿ ಹೆಗಲ ಮೇಲೆ ಬೆನ್ನಿಗೆ ಬಂದೂಕು ನೇತಾಡಿಸಿಕೊಂಡು ಓಡಾಡುವುದು ಅವರಿಗೆ ಒಂದು ರೀತಿ ಅಭ್ಯಾಸವಾಗಿ ಹೋಗಿದೆ' ಎಂದು ಹೇಳಿದ್ದ. ಆದರೆ ಜನ ತಮ್ಮನ್ನು ಪ್ರೀತಿಯಿಂದ ಮಾತನಾಡಿಸುವುದನ್ನು ಕೇಳಿದಾಗ ಭಾವೇಶ್‌ಗೆ ಚಂಬಲ್ ಕಣಿವೆಯ ಭೀತಿ ಮತ್ತು ಬಂದೂಕು ನೇತಾಡಿಸಿಕೊಂಡು ಓಡಾಡುವ ಜನರ ಭಯ ಕಳಚಿ ಬಿತ್ತು. ಅನೇಕ ಬಂದೂಕುಧಾರಿ ಗ್ರಾಮಸ್ಥರು ಇವರನ್ನು ಸ್ವಾಗತಿಸಿ, ಮನೆಗೆ ಕರೆದು ಚೆನ್ನಾಗಿ ಊಟ ಬಡಿಸಿ ಉಪಚಾರ ಮಾಡಿದರು. ಅವರ ಊಟೋಪಚಾರಗಳು, ಸನ್ನಡತೆಯ ಮಾತುಗಳು ಭಾವೇಶ್‌ಗೆ ಸಂತಸ ನೀಡಿತ್ತು.

ಅಲ್ಲಿಂದ ಮುಂದೆ ಸಾಗಿ ಸಾಗರ ಎಂಬಲ್ಲಿಗೆ ತಲುಪಿದರು. ಮೊರೀನಾದಿಂದ ಅಲ್ಲಿಗೆ ಸುಮಾರು 360 ಕಿ.ಮೀ. ದೂರವಿತ್ತು. ಅಲ್ಲಿಯೂ ಅವರಿಗೆ ಸೀ.ಜೆ. ಪಟೇಲ್ ಕಂಪನಿಯ ಅತಿಥಿ ಗೃಹದಲ್ಲಿ ಒಂದು ರಾತ್ರಿ ಉಳಿಯುವ ವ್ಯವಸ್ಥೆಯಾಯಿತು. ಮೈ ಮನಸ್ಸು ಹಿತವಾಗಿ ಮತ್ತೆ ಚೇತರಿಸಿಕೊಂಡು ಅಲ್ಲಿಂದ ಸುಮಾರು 350 ಕಿ.ಮೀ. ದೂರದ ಬಾಲಾಘಾಟ್‌ಗೆ ಹೊರಟರು. ನಡುವೆ ಲಾಖ್ನೋನ್ ಗ್ರಾಮವಿತ್ತು. ಅಲ್ಲಿಯ ಓರ್ವ ವೈದ್ಯ ಅವರಿಗೆ ತಮ್ಮ ಆಸ್ಪತ್ರೆಯಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟ.

ಆ ಸಣ್ಣ ಊರಿನಲ್ಲಿ ರಾತ್ರಿಯ ಊಟಕ್ಕೆ ಒಂದು ಡಾಬಾಗೆ ಹೋದರು. ಅಲ್ಲಿ ಜಿಪುಣಾಗ್ರೇಸರ